ಅಸಲು ದಾವಾ ನಂಃ 46/2022
ಡಿ ಡಬ್ಲ್ಯುಃ04

<u>ದಿನಾಂಕಃ **26-06-2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಮಾಡಿಸಲಾಯಿತು.</u>

<u>ಮುಖ್ಯವಿಚಾರಣೆಃ **4** ನೇ ಪ್ರತಿವಾದಿಯ ಪರ ಶ್ರೀ ಬಿ.ಎಸ್.ಎನ್. ವಕೀಲರಿಂದಃ</u>

1.ನಾನು ಈ ದಾವೆಯಲ್ಲಿ 4 ನೇ ಪ್ರತಿವಾದಿಯ ಪರ ಸಾಕ್ಷಿದಾರನಿದ್ದು. ನನ್ನ ಸಾಕ್ಷ್ಯದ ಮುಖ್ಯವಿಚಾರಣೆಯಾಗಿ ಪ್ರಮಾಣಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ . ಪ್ರಮಾಣಪತ್ರದಲ್ಲಿ ಬರೆದಿರುವ ವಿಷಯಗಳು ನನಗೆ ತಿಳಿದಿದೆ ಮತ್ತು ಸತ್ಯವಾಗಿದೆ.

2. ಸಾಕ್ಷಿಗೆ ನಿಶಾನೆ-ಡಿ.2 ನ್ನು ತೋರಿಸಲಾಗಿ ಸಾಕ್ಷಿಯು ಸದರಿ ದಾಖಲೆಯಲ್ಲಿ ತಮ್ಮ ತಂದೆಯ 2 ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಶಾನೆ-ಡಿ.2 ಎನ್ ಹಾಗೂ ಓ ಎಂದು ಗುರುತಿಸಲಾಯಿತು. ನಮ್ಮ ತಂದೆ ದಿನಾಂಕ 29.09.2009 ರಂದು ತೀರಿಕೊಂಡಿರುತ್ತಾರೆ.

<u>ಪಾಟೀ ಸವಾಲುಃ ವಾದಿ ಪರ ಶ್ರೀ ಎಲ್.ವಿ.ಎಂ., ವಕೀಲರಿಂದಃ</u>

1. ನನಗೆ ನೀಡಿದ ನೋಟಿಸಿನಲ್ಲಿ ಯಾವ ವಿಚಾರಕ್ಕೆ ಸಂಬಂಧಿಸಿದಂತೆ ಸಾಕ್ಷಿ ನುಡಿಯುವಂತೆ ಹೇಳಿರುವುದಿಲ್ಲಾ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ಕೊಟ್ಟಿರುತ್ತೇನೆ. ಈ ದಾವೆಯಲ್ಲಿ ವಾದಿ ರಾಮು ಎಂದು ಪ್ರತಿವಾದಿಗಳು ಒಟ್ಟು 8 ಜನ ಇರುತ್ತಾರೆ. ಸದರಿ ಪ್ರತಿವಾದಿಗಳು ಯಾರ್ಯಾರು ಇರುತ್ತಾರೆ ಎಂದು ನನಗೆ ಹೇಳಲಾಗುವುದಿಲ್ಲ. ನಾನು 1 ರಿಂದ 10 ನೇ ತರಗತಿಯನ್ನು ಜೈಪುರದಲ್ಲಿ, ಪಿ.ಯು.ಸಿಯನ್ನು ಉಜಿರೆಯಲ್ಲಿ ಹಾಗೂ ನನ್ನ ಪದವಿಯನ್ನು ಹಾಸನದಲ್ಲಿ ಮುಗಿಸಿರುತ್ತೇನೆ. ನಾನು 2007 ರಿಂದ ಬೆಂಗಳೂರಿನಲ್ಲಿ ವಾಸ ಇರುತ್ತೇನೆ.

2. ನಮ್ಮ ಮೂಲ ಊರು ಅದಡ್ಡ ಇರುತ್ತದೆ. ವಾದಿ ಮತ್ತು ಪ್ರತಿವಾದಿಯರು ನಮ್ಮ ಊರಿನವರು ಇರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ನಮ್ಮ ಜೈಪುರದಲ್ಲಿ ಟೈಲರಿಂಗ್ ಮಾಡುತ್ತಿದ್ದು ನಮ್ಮ ತಂದೆಗೆ ವಸಂತ್ ಮತ್ತು ಅವರ ಅಣ್ಣ ತಮ್ಮದಿರು ಪರಿಚಯ ಇರುತ್ತಾರೆ. ವಸಂತ್ ಇವರ ಅಣ್ಣ ವೆಂಕಟೇಶ್ ಇವರು ಎಲ್ಲಿ ವಾಸ ಇರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಸಾಕ್ಷಿ ಮುಂದುವರಿದು ನಾನು 2011 ರಲ್ಲಿ ಜೈಪುರ ಬಿಟ್ಟಿದ್ದು ಅವರು ಈಗ ಎಲ್ಲಿ ವಾಸ ಇರುತ್ತಾರೆ ಎಂದು ಗೊತ್ತಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ವಾದಿ ಎಲ್ಲಿ ವಾಸ ಇರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. 4 ನೇ ಪ್ರತಿವಾದಿ ಕೊಪ್ಪ ವಾಟರ್ ಟ್ಯಾಂಕ್ ಬಳಿ ವಾಸ ಇರುತ್ತಾರೆ. ನಮ್ಮ ತಂದೆ ನನ್ನ ಜೊತೆ 2011 ರಲ್ಲಿ ಬೆಂಗಳೂರಿಗೆ ಬಂದಿರುವುದಿಲ್ಲ ಅವರು ಕಟ್ಟಡದಲ್ಲಿ ತೋಟ ಇದ್ದು ಅಲ್ಲಿ ನೋಡಿಕೊಳ್ಳುತ್ತಾ ಇರುತ್ತಿದ್ದರು ಎಂದು

ಉತ್ತರಿಸಿರುತ್ತಾರೆ. ನಮ್ಮ ತಂದೆಗೆ ನಾನು ಮತ್ತು ನನ್ನ ತಮ್ಮ ಇಬ್ಬರು ಮಕ್ಕಳಿರುತ್ತೇವೆ. ನನ್ನ ತಮ್ಮ ಬೆಂಗಳೂರಿನಲ್ಲಿ ರೈಮಂಡ್ ಶೋರೂಮ್ನಲ್ಲಿ ಕೆಲಸ ಮಾಡುತ್ತಿರುತ್ತಾರೆ.

3. ನಾನು ನನ್ನ ಪ್ರಮಾಣ ಪತ್ರವನ್ನು ನವೀನ್ ವಕೀಲರ ಸಹಾಯಕರ ಬಳಿ ಟೈಪ್ ಮಾಡಿಸಿರುತ್ತೇನೆ. ದಾನ ಪತ್ರವನ್ನು 2016 ರಲ್ಲಿ ಶಕುಂತಲಮ್ಮ ರವರು ವಸಂತ್ ರವರಿಗೆ ಬರೆದುಕೊಟ್ಟಿರುತ್ತಾರೆ. ಅವಾಗ ನಾನು ಇರಲಿಲ್ಲ. ಸದರಿ ದಾನ ಪತ್ರವನ್ನು ಮನೆಗೆ ಬರೆದುಕೊಟ್ಟಿರುವ ಬಗ್ಗೆ ವಕೀಲರ ಸಹಾಯಕರು ನನಗೆ ಹೇಳಿರುತ್ತಾರೆ. ನಿಶಾನೆ ಡಿ.2 ರಲ್ಲಿ ಕೆ.ಟಿ.ಮಂಜುನಾಥ್ ಇವರ ತಂದೆಯ ಹೆಸರನ್ನು ಬರೆದಿರುವುದಿಲ್ಲ ಎಂದರೆ ಸರಿ. ನನ್ನನ್ನು ಗುರುತಿಸುವುದು ನಮ್ಮ ತಂದೆಯ ಹೆಸರಿನ ಆಧಾರದ ಮೇಲೆ ಎಂದರೆ ಸರಿ. ನಿಶಾನೆ ಡಿ-2 ಎನ್ ಇದು ನಿಮ್ಮ ತಂದೆಯ ಸಹಿ ಇರುವುದಿಲ್ಲ ನೀವು 4 ನೇ ಪ್ರತಿವಾದಿಯ ಚಿತಾವಣೆ ಮೇರೆಗೆ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಬರೆದ ವಿಚಾರಗಳು ಸಂಪೂರ್ಣ ಸುಳ್ಳಿನಿಂದ ಕೂಡಿದ್ದು ನನಗೆ ಅದರ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ಶಕುಂತಲಮ್ಮ ಇವರು ವಸಂತ್ ಇವರಿಗೆ ದಾನ ಪತ್ರವನ್ನು ಬರೆದು ಕೊಡುವ ಕಾಲಕ್ಕೆ ನಮ್ಮ ತಂದೆ ಇದ್ದು ಸಹಿ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ವಸಂತ್ ಇವರನ್ನು ಹೊರತು ಪಡಿಸಿ ಉಳಿದ ಪ್ರತಿವಾದಿಗಳು ಮತ್ತು ವಾದಿಯ ಪರಿಚಯ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ವಸಂತ್ ಇವರ ವಕೀಲರ ಕಛೇರಿಯಲ್ಲಿ ತಯಾರಿಸಲಾಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರಕ್ಕೆ ನನ್ನನ್ನು ಗುರುತಿಸಿರುವವರು 4 ನೇ ಪ್ರತಿವಾದಿಯ ವಕೀಲರು ಎಂದರೆ ಸರಿ. ನನಗೆ ಯಾವುದೇ ವಿಚಾರಗಳು ಗೊತ್ತಿಲ್ಲದೆ ಇದ್ದರು 4 ರ ಪ್ರತಿವಾದಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ಪಾಟೀಸವಾಲು ಪ್ರತಿವಾದಿ 1 ರಿಂದ 3 ಹಾಗೂ 5 ರಿಂದ 7 ರ ಪರ ವಕೀಲರು ವಾದಿ ಪರ ವಕೀಲರು ಮಾಡಿದ ಪಾಟೀಸವಾಲನ್ನು ತಮ್ಮ ಪಾಟೀಸವಾಲು ಎಂದು ಅಳವಡಿಸಿಕೊಂಡಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ,
ಸಂಚಾರಿ ನ್ಯಾಯಾಲಯ, ಕೊಪ್ಪ.

ಸಾಕ್ಷಿದಾರರ ಸಹಿಃ